ಚಿಕಿತ್ಸಾ ವಿಭಾಗ, ಶಸ್ತ್ರ ಚಿಕಿತ್ಸಾ ಕೊಠಡಿ, ವಾರ್ಡ್‌ಗಳು, ರೇಡಿಯಾಲಜಿ ವಿಭಾಗ, ಹೊರರೋಗಿ ವಿಭಾಗ, ಗ್ಯಾರೇಜ್, ಕಾರಿಡಾರ್‌ಗಳು, ರ್‍ಯಾಂಪ್, 5 ವೈದ್ಯರ, 10 ದಾದಿಯರ ಮತ್ತು 10 ಗ್ರೂಪ್ 'ಡಿ' ನೌಕರರ ವಸತಿ ಗೃಹಗಳ ನಿರ್ಮಾಣ, ಹಳೆ ಆಸ್ಪತ್ರೆ ನವೀಕರಣ, ನೀರು ಸರಬರಾಜು, ನೈರ್ಮಲೀಕರಣ ಸುಧಾರಣೆ, ವಿದ್ಯುದೀಕರಣ, ವರ್ಕ್‌ಶಾಪ್, ರಕ್ತನಿಧಿ ಕೇಂದ್ರ, ಶವಗಾರ, ಹೊರಾವರಣ ವಿದ್ಯುತ್ ಕಾಮಗಾರಿಗಳು, ಟೈಲ್ಸ್ ಅಳವಡಿಕೆ, ಸೋಲಾರ್ ವಾಟರ್ ಹೀಟರ್ ಅಳವಡಿಕೆ ಮತ್ತು ಲ್ಯಾಂಡ್ ಸ್ಕೇಪಿಂಗ್ ಸೇರಿದೆ. ಈ ಎಲ್ಲಾ ಕಾಮಗಾರಿಗಳು ಬಹುತೇಕ ಮುಗಿದಿದ್ದು ಸದ್ಯದಲ್ಲಿಯೆ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಕುರಿತು

725 (3439) ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ.ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು ?

ಆ) ಗ್ರಾಮ ಪಂಚಾಯತಿಗಳಿಗೆ ಅನುಗುಣವಾಗಿ ಕಾರ್ಯದರ್ಶಿಗಳು ಇದ್ದಾರೆಯೆ ?

ಇ) ಇಲ್ಲದಿದ್ದಲ್ಲಿ ಈ ಕೊರತೆ ನೀಗಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಈ) ಗ್ರಾಮ ಪಂಚಾಯತಿಗಳಿಗೆ ನೀಡುವ ವಿವಿಧ ರೀತಿಯ ಅನುದಾನಗಳ ಮೊತ್ತವೆಷ್ಟು ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ 5675.

ಆ) ಇಲ್ಲ. ಪ್ರಸ್ತುತ 258 ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-1 ಮತ್ತು 181 ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-11 ಹುದ್ದೆಗಳು ಖಾಲಿ ಇರುತ್ತವೆ.

ಇ) ಈ ಹುದ್ದೆಗಳನ್ನು 2000-2001ನೇ ಸಾಲಿನಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ಗ್ರಾಮ ಪಂಚಾಯತಿಗಳಿಗೆ ನೀಡುವ ವಿವಿಧ ರೀತಿಯ ಅನುದಾನಗಳ ಒಟ್ಟು ಮೊತ್ತ ರೂ. 18058.00 ಲಕ್ಷಗಳು, ಇದಲ್ಲದೆ 1999-2000ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳಿಗೆ ಹೆಚ್ಚುವರಿ ಅನುದಾನವಾಗಿ ರೂ. 5675.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮಂಡ್ಯ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯವ್ಯಾಪ್ತಿ

2726 (3440) ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯವ್ಯಾಪ್ತಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ದಿಸೆಯಲ್ಲಿ ಮಂಡ್ಯ ತಾಲ್ಲೂಕಿಗೆ ಬಿ.ಇ.ಓ ರವರ ಹೆಚ್ಚುವರಿ ಇನ್ನೊಂದು ಕಛೇರಿ ಹಾಗೂ ಹುದ್ದೆಗಾಗಿ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?